# ಕಲಿಕೆಯ ಖುಷಿಯಲ್ಲಿ ರಿಷಿ

ಕೊರೊನಾ ಬಿಕ್ಕಟ್ಟನ್ನು ರಿಷಿ, ಸಿನಿಮಾ ಅಧ್ಯಯನಕ್ಕೆ, ಸಾಮಾಜಿಕ ಜಾಗೃತಿಯ ಕೆಲಸಗಳಿಗೆ ಬಳಸಿಕೊಂಡಿದ್ದಾರೆ. ಜಗತ್ತಿನ ಹಲವು ಶ್ರೇಷ್ಠ ಸಿನಿಮಾಗಳು, ನಟರನ್ನು ಸಿನಿಮಾ ವಿದ್ಯಾರ್ಥಿಯಾಗಿ ಅಭ್ಯಸಿಸಿರುವ ಅವರು ತಮ್ಮ ಮುಂದಿನ ಸಿನಿಮಾಗಳಲ್ಲಿ ಹೊಸತೇನೋ ಕೊಡುವ ಉತ್ಸಾಹದಲ್ಲಿದ್ದಾರೆ.

■ ಪದ್ಮನಾಭ ಭಟ್



ಹೊಸ ಪೀಳಿಗೆಯ ಸಿನಿಮಾ ನಟರಲ್ಲಿಯೇ ನೋಟದಲ್ಲಿಯೂ, ನುಡಿಯಲ್ಲಿಯೂ ವಿಶಿಷ್ಟವಾಗಿ ಕಾಣಿಸುವವರು ರಿಷಿ. ನಟನೆಯ ಕಡೆಗೆ ಇರುವ ತೀವ್ರವಾದ ವ್ಯಾಮೋಹವೇ ಅವರನ್ನು ಚಂದನವನದಲ್ಲಿ ಯಶಸ್ಸಿನ ಮೆಟ್ಟಿಲುಗಳನ್ನು ಹತ್ತಿಸುತ್ತಿವೆ. 'ಆಪರೇಷನ್ ಅಲವೇಲಮ್ಮ', 'ಕವಲುದಾರಿ'ಗಳಂಥ ಸಿನಿಮಾಗಳನ್ನು ಕೊಟ್ಟಿರುವ ರಿಷಿ, ಕಳೆದ ವರ್ಷಾಂತ್ಯದಲ್ಲಿ ದಾಂಪತ್ಯ ಜೀವನಕ್ಕೂ ಕಾಲಿಟ್ಟಿದ್ದಾರೆ. ರಿಷಿ ಬದುಕನ್ನು ಪ್ರವೇಶಿಸಿರುವ ಸ್ವಾತಿ ಅವರ ಬಾಳಸಂಗಾತಿಯಷ್ಟೇ ಅಲ್ಲ, ಸಿನಿಮಾ ವಿಷಯಗಳನ್ನು ಚರ್ಚಿಸುವ ಗೆಳತಿಯೂ ಹೌದು. 'ಸ್ವಾತಿ ನನಗಿಂತ ತುಂಬ ಜಾಸ್ತಿ ಓದುತ್ತಾಳೆ. ಹಾಗಾಗಿ ಯಾವುದಾದರೂ ಕಥೆಯ ಬಗ್ಗೆ ಚರ್ಚಿಸುವುದಾದರೆ ಅವಳ ಬಳಿಯೇ ಚರ್ಚಿಸುತ್ತೇನೆ' ಎಂದು ಹೇಳಿಕೊಳ್ಳುತ್ತಾರೆ ರಿಷಿ.

ಕೊರೊನಾದಿಂದ ಚಿತ್ರರಂಗ ಸ್ಥಗಿತಗೊಳ್ಳದಿದ್ದರೆ ಇಷ್ಟರಲ್ಲಿ ರಿಷಿ ನಟನೆಯ ಮೂರು ಸಿನಿಮಾಗಳು ಬಿಡುಗಡೆಯಾಗಬೇಕಿತ್ತು. 'ಸಕಲಕಲಾವಲ್ಲಭ' ಬಿಡುಗಡೆಗೆ ಸನ್ನದ್ಧವಾಗಿದೆ. ಇಸ್ಲಾವುದ್ದೀನ್ ಎಂಬ ಹೊಸ ನಿರ್ದೇಶಕರ ನಿರ್ದೇಶನದ, ಇನ್ನೂ ಹೆಸರಿಡದ ಚಿತ್ರವೂ ಮುಕ್ತಾಯಗೊಂಡಿದೆ. 'ರಾಮನ ಅವತಾರ' ಸಿನಿಮಾ ಎರಡು ಶೆಡ್ಯೂಲ್ ಮುಗಿದಿದೆ. ನವೆಂಬರ್ ತಿಂಗಳಿಂದ ಮತ್ತೆ ಚಿತ್ರೀಕರಣ ಪ್ರಾರಂಭಿಸುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ. ಮೋಹನ್ ಸಿಂಗ್ ನಿರ್ದೇಶನದ ಇನ್ನೊಂದು ಸಿನಿಮಾವನ್ನೂ ರಿಷಿ ಒಪ್ಪಿಕೊಂಡಿದ್ದಾರೆ. ಹೀಗೆ ಕೈತುಂಬ ಸಿನಿಮಾಗಳನ್ನು ಇಟ್ಟುಕೊಂಡಿದ್ದ ರಿಷಿಗೆ ಅನಿರೀಕ್ಷಿತವಾಗಿ ಕೊರೊನಾ ಕಾರಣಕ್ಕೆ ಗೃಹಬಂಧನಕ್ಕೆ ಒಳಗಾಗಬೇಕಾಗಿದ್ದು ತುಂಬ ಸಂಕಟವನ್ನೇನೂ ತಂದಿಲ್ಲ. ಯಾಕೆಂದರೆ ಜಗತ್ತಿಗೇ ಒದಗಿದ ಈ ವಿಪತ್ತನ್ನು ಅವರು ರಚನಾತ್ಮಕವಾಗಿ ಬಳಸಿಕೊಂಡಿದ್ದಾರೆ.

'ಲಾಕ್‌ಡೌನ್ ಪ್ರಾರಂಭವಾದ ನಂತರ ಮೂರು ನಾಲ್ಕು ತಿಂಗಳನ್ನು ತುಂಬ ರಚನಾತ್ಮಕವಾಗಿಯೇ ಬಳಸಿಕೊಂಡೆ. ಇದುವರೆಗೆ ನಾನು ಸಿನಿಮಾಗಳನ್ನು ಜಾಸ್ತಿ ನೋಡುತ್ತಲೇ ಇರಲಿಲ್ಲ. ಹೀಗಿರುವಾಗ ಎರಡು ಮೂರು ಸಿನಿಮಾಗಳಲ್ಲಿ ನಟಿಸಿದ ಮೇಲೆ ನಾಲ್ಕನೇ ಸಿನಿಮಾದಲ್ಲಿ ಹೊಸತೇನನ್ನೋ ಕೊಡುವುದು ನಟನಿಗೆ ಕಷ್ಟವಾಗಿಬಿಡುತ್ತದೆ. ಈ ಲಾಕ್‌ಡೌನ್‌ನಲ್ಲಿ ನಾನು ಕೂತು ಜಗತ್ತಿನ ಹಲವು ಶ್ರೇಷ್ಠ ಸಿನಿಮಾಗಳನ್ನು ನೋಡಿದ್ದೇನೆ. ಹಲವು ಶ್ರೇಷ್ಠ ನಟರ ನಟನಾವಿಧಾನವನ್ನು ಅಭ್ಯಸಿಸಿದ್ದೇನೆ. ಕಥೆ, ಚಿತ್ರಕಥೆ, ನಿರೂಪಣಾ ತಂತ್ರಗಳು ಎಲ್ಲವನ್ನೂ ಗಮನಿಸಿದ್ದೇನೆ. ಹೀಗಾಗಿ ಲಾಕ್‌ಡೌನ್ ಎನ್ನುವುದು ನನ್ನ ಪಾಲಿಗೆ ಹಲವು ಹೊಸ ವಿಚಾರಗಳನ್ನು ಕಲಿತುಕೊಳ್ಳುವ, ಆ ಮೂಲಕ ನನ್ನನ್ನು ನಾನು ಹೊಸತಾಗಿ ಕಟ್ಟಿಕೊಳ್ಳುವ ಅವಕಾಶವಾಗಿ ದಕ್ಕಿದೆ' ಎನ್ನುತ್ತಾರೆ ರಿಷಿ.

ರಿಷಿ ಬಾಳಸಂಗಾತಿ ಸ್ವಾತಿ ಅವರಿಗಿಂತ ಹೆಚ್ಚು ಸಿನಿಮಾಗಳನ್ನು ನೋಡುತ್ತಾರಂತೆ. ಹಾಗಾಗಿ ನೋಡಿದ ಸಿನಿಮಾಗಳ ಬಗ್ಗೆ ಚರ್ಚಿಸಲೂ ಅವರಿಗೆ ಸಾಧ್ಯವಾಗಿದೆ.

'ಕೊರೊನಾದಿಂದ ಜಗತ್ತನ್ನು, ನಮ್ಮ ಸುತ್ತಮುತ್ತಲಿನವರನ್ನು ನೋಡುವ